# ಮೈಸೂರು ವಿಶ್ವವಿದ್ಯಾನಿಲಯ

(ನ್ಯಾಕ್ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ)

(ಎನ್.ಐ.ಆರ್.ಎಫ್–2024 : ರಾಜ್ಯ ಸಾರ್ವಜನಿಕ ವಿಶ್ವವಿದ್ಯಾನಿಲಯ ವರ್ಗದಲ್ಲಿ 19ನೇ ಸ್ಥಾನ ವಿಶ್ವವಿದ್ಯಾನಿಲಯ ವರ್ಗದಲ್ಲಿ 54ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 86ನೇ ಸ್ಥಾನ)

**ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು – 570006**

ದೂರವಾಣಿ: 0821–2419318/386/429 e-mail : dswuommgm@gmail.com

ವಿಕ್ಷೇಪಾ.2/15/ 1047 /2025–26 ದಿನಾಂಕ : 19–12–2025

## ಸುತ್ತೋಲೆ

**ವಿಷಯ: 2025–26ನೇ ಶೈಕ್ಷಣಿಕ ಸಾಲಿಗೆ ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸುವ ಬಗ್ಗೆ.**

*****

ಮೈಸೂರು ವಿಶ್ವವಿದ್ಯಾನಿಲಯದ ಅಂಗ ಮತ್ತು ಸಂಯೋಜಿತ ಕಾಲೇಜುಗಳು ಹಾಗೂ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ವಿದ್ಯಾರ್ಥಿಗಳಿಗೆ 2025–26ನೇ ಶೈಕ್ಷಣಿಕ ಸಾಲಿನ 'ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆ'ಗಳನ್ನು **2026ನೇ ಜನವರಿ ತಿಂಗಳ 06** ಮತ್ತು **07**ನೇ ತಾರೀಖಿನಂದು ಎರಡು ದಿವಸಗಳ ಕಾಲ ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ವಿವಿಧ ಸಭಾಂಗಣಗಳಲ್ಲಿ ಏರ್ಪಡಿಸಲಾಗುತ್ತಿದೆ. ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆ–1ರಲ್ಲಿ ಸೂಚಿಸಿರುವಂತೆ, ತಮ್ಮ ಕಾಲೇಜಿನಿಂದ/ಸ್ನಾತಕೋತ್ತರ ವಿಭಾಗದಿಂದ ವಿವಿಧ ಕಲಾ ಪ್ರದರ್ಶನಗಳ ತಂಡಗಳನ್ನು ಸ್ಪರ್ಧೆಗಳಲ್ಲಿ ಭಾಗವಹಿಸಲು ತರಬೇತಿಗಳನ್ನು ನೀಡಿ ಕಳುಹಿಸಿಕೊಡಬೇಕಾಗಿ ತಿಳಿಸಲಾಗಿದೆ. ಸ್ಪರ್ಧೆಗಳಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳನ್ನು ಗಳಿಸುವ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವನ್ನು ನೀಡಲಾಗುವುದು. ಈ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾನಿಲಯದ ಸಾಂಸ್ಕೃತಿಕ ಆಯ್ಕೆ ಸಮಿತಿಯಲ್ಲಿ ಆಯ್ಕೆ ಮಾಡುವವರನ್ನು ಮಾತ್ರ ಮುಂದೆ ನಡೆಯುವ **ದಕ್ಷಿಣ–ಪಶ್ಚಿಮ ವಲಯ ಯುವಜನೋತ್ಸವ (South-West Zone Youth Festival)** ಸ್ಪರ್ಧೆಗಳಿಗೆ ವಿಶ್ವವಿದ್ಯಾನಿಲಯದ ಪ್ರತಿನಿಧಿಗಳಾಗಿ ಆಯ್ಕೆ ಮಾಡಿ ಕಳುಹಿಸಿಕೊಡಲಾಗುವುದು.

**ತಂಡದಲ್ಲಿರಬೇಕಾದ ವಿದ್ಯಾರ್ಥಿಗಳ ಸಂಖ್ಯೆ:**

ಕಾಲೇಜು/ಸ್ನಾತಕೋತ್ತರ ವಿಭಾಗಗಳಿಂದ ಪ್ರತಿನಿಧಿಸುವ ವಿದ್ಯಾರ್ಥಿಗಳ ಸಂಖ್ಯೆ 49ನ್ನು ಮೀರಬಾರದು. ವಿದ್ಯಾರ್ಥಿಗಳು ಒಂದಕ್ಕಿಂತ ಹೆಚ್ಚಿನ ಸ್ಪರ್ಧೆಗಳಲ್ಲಿ ಭಾಗವಹಿಸುವ ಪ್ರೌಢಿಮೆ, ಕೌಶಲ್ಯ, ಪ್ರತಿಭೆ ಮತ್ತು ಪ್ರದರ್ಶನ ಸಾಮರ್ಥ್ಯಗಳನ್ನು ಗಣನೆಗೆ ತೆಗೆದುಕೊಂಡು, **ದಕ್ಷಿಣ–ಪಶ್ಚಿಮ ವಲಯ ಯುಜನೋತ್ಸವದ** ಸ್ಪರ್ಧೆಗಳಲ್ಲಿ ಭಾಗವಹಿಸುವ ತಂಡವನ್ನು ಆಯ್ಕೆ ಮಾಡಲಾಗುವುದು.

**ಸ್ಪರ್ಧಿಗಳ ಅರ್ಹತೆ:**

ವಿಶ್ವವಿದ್ಯಾನಿಲಯದ ಘಟಕ ಹಾಗೂ ಸಂಯೋಜಿತ ಕಾಲೇಜುಗಳಲ್ಲಿ ಪದವಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಮತ್ತು ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ಪದವಿಯಲ್ಲಿ ಪೂರ್ಣಕಾಲಿಕ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಮಾತ್ರ ಈ ಸ್ಪರ್ಧೆಗಳಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ. ಯಾವುದೇ ಡಿಪ್ಲೊಮೊ, ಸ್ನಾತಕೋತ್ತರ ಡಿಪ್ಲೊಮೊ, ಅರೆಕಾಲಿಕ ವಿದ್ಯಾರ್ಥಿಗಳು ಮತ್ತು ಪಿ.ಹೆಚ್‌ಡಿ., ಸಂಶೋಧನಾರ್ಥಿಗಳು ಈ ಸ್ಪರ್ಧೆಗಳಲ್ಲಿ ಭಾಗವಹಿಸುವಂತಿಲ್ಲ.

ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಯ ವಯೋಮಿತಿಯು ದಿನಾಂಕ 01–07–2025ಕ್ಕೆ 25 ವರ್ಷಗಳನ್ನು ಮೀರಿರಬಾರದು. ಈ ಬಗ್ಗೆ ಕಾಲೇಜು/ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಂದ ಸ್ಪರ್ಧಿಸುವ ವಿದ್ಯಾರ್ಥಿಯು ಪ್ರಾಂಶುಪಾಲರು/ವಿಭಾಗದ ಮುಖ್ಯಸ್ಥರುಗಳಿಂದ **ದೃಢೀಕೃತ ಪರಿಚಯ ಪತ್ರವನ್ನು ಮತ್ತು ಗುರುತಿನ ಚೀಟಿಯನ್ನು ತರಬೇಕು (ಇದು ಕಡ್ಡಾಯ).**

**ತಂಡದ ಖರ್ಚು ವೆಚ್ಚ:**

ಕಾಲೇಜು/ಸ್ನಾತಕೋತ್ತರ ವಿಭಾಗಗಳಿಂದ ಭಾಗವಹಿಸುವ ಸ್ಪರ್ಧಾರ್ಥಿಗಳು, ಸಹ ಕಲಾವಿದರು ಮತ್ತು ಮೇಲ್ವಿಚಾರಕರ ಪ್ರಯಾಣದ ಖರ್ಚು, ಮೈಸೂರಿನಲ್ಲಿ ವಸತಿ, ಭೋಜನ ವೆಚ್ಚ ಹಾಗೂ ಇತರೆ ಖರ್ಚುಗಳನ್ನು ಆಯಾಯ ಕಾಲೇಜು/ಸ್ನಾತಕೋತ್ತರ ವಿಭಾಗದವರೇ ವ್ಯವಸ್ಥೆ ಮಾಡಿಕೊಳ್ಳಬೇಕಾಗಿರುತ್ತದೆ.

**ಪ್ರವೇಶಕ್ಕೆ ಕೊನೆಯ ದಿನಾಂಕ ಹಾಗೂ ನಿಬಂಧನೆಗಳು:**

ಅಂತರ ಕಾಲೇಜು ಸ್ಪರ್ಧೆಗಳು ಸ್ಪರ್ಧಾರ್ಥಿಗಳನ್ನು ಕಳುಹಿಸುವ ಕಾಲೇಜಿನ ಪ್ರಾಂಶುಪಾಲರು/ಸ್ನಾತಕೋತ್ತರ ಅಧ್ಯಯನ ವಿಭಾಗದ ಮುಖ್ಯಸ್ಥರು/ನಿರ್ದೇಶಕರುಗಳು ಸ್ಪರ್ಧಿಸುವ ವಿದ್ಯಾರ್ಥಿಗಳ ವಿವರಗಳನ್ನೊಳಗೊಂಡ ಪಟ್ಟಿಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆ-1ರಲ್ಲಿಯೇ (ಇದು ಕಡ್ಡಾಯ) **ದಿನಾಂಕ 26-12-2025 (ಶುಕ್ರವಾರ)ಕ್ಕೆ** ಅಥವಾ ಅದಕ್ಕೂ ಮುಂಚಿತವಾಗಿಯೇ ಈ ನಿರ್ದೇಶನಾಲಯಕ್ಕೆ ಇ-ಮೇಲ್/ ಪತ್ರದ ಮೂಲಕ ತಲುಪವಂತೆ ಕಳುಹಿಸಬೇಕು (ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳ ಹೆಸರುಗಳನ್ನು ದಪ್ಪ ಅಕ್ಷರಗಳಲ್ಲಿ (English Block Letters) ನಮೂದಿಸುವುದು.

1. ಅಂತರ ಕಾಲೇಜು ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಸಮಾರೋಪ ಸಮಾರಂಭದಲ್ಲಿ **ಪ್ರಶಸ್ತಿ ಪ್ರಮಾಣ ಪತ್ರವನ್ನು ವಿತರಿಸಲಾಗುವುದು.**
2. ಕಾಲೇಜು/ ವಿಭಾಗಗಳ ಸ್ಪರ್ಧಾರ್ಥಿಗಳ ತಂಡದೊಡನೆ ಐದು ಜನಕ್ಕೆ ಮೀರದಂತೆ ಸಹ ಕಲಾವಿದರನ್ನು ಕಳಹಿಸಬಹುದು. ಸಹ ಕಲಾವಿದರು ವಿದ್ಯಾರ್ಥಿಗಳಾಗಿರಬಹುದು/ವಿದ್ಯಾರ್ಥಿಗಳಲ್ಲದವರಾಗಿರಬಹುದು. ಸಹ ಕಲಾವಿದರು ಬಹುಮಾನ ಮತ್ತು ಪ್ರಶಸ್ತಿ ಪ್ರಮಾಣ ಪತ್ರಗಳಿಗೆ ಅರ್ಹರಾಗಿರುವುದಿಲ್ಲ. ತಂಡದಲ್ಲಿ ಮಹಿಳಾ ವಿದ್ಯಾರ್ಥಿನಿಯರು ಇದ್ದಲ್ಲಿ, ಒಬ್ಬರು ಮಹಿಳಾ ಅಧ್ಯಾಪಕರನ್ನು ಒಳಗೊಂಡಂತೆ, ಇಬ್ಬರು ಅಧ್ಯಾಪಕರನ್ನು ಮೇಲ್ವಿಚಾರಕರನ್ನಾಗಿ ಕಳುಹಿಸಬೇಕು.
3. **ತೀರ್ಪುಗಾರರ ತೀರ್ಮಾನವೇ ಅಂತಿಮವಾಗಿರುತ್ತದೆ. ಇದರಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.**
4. ಸ್ಪರ್ಧೆಗಳನ್ನು ನಡೆಸುವ ಸಂಬಂಧ 3 ಅಥಾವ 3ಕ್ಕಿಂತ ಹೆಚ್ಚಿನ ಸ್ಪರ್ಧಾರ್ಥಿಗಳು ಭಾಗವಹಿಸಿದ್ದಲ್ಲಿ ಮಾತ್ರ ಸೂಚಿತ ಸ್ಪರ್ಧೆಗಳನ್ನು ನಡೆಸಲಾಗುವುದು.

(ಪ್ರೊ. ಗುರುಸಿದ್ದಯ್ಯ ಸಿ.) 19/12/25
ನಿರ್ದೇಶಕ
DIRECTOR OF STUDENT WELFARE
UNIVERSITY OF MYSORE, MYSURU

**ವಿಶೇಷ ಸೂಚನೆ:**

1. ವಿದ್ಯಾರ್ಥಿಗಳು ತಮ್ಮ ಕಾಲೇಜು/ಸ್ನಾತಕೋತ್ತರ ವಿಭಾಗಗಳಿಂದ ನೀಡಿರುವ ಗುರುತಿನ ಚೀಟಿ ಅಥವಾ ಪರಿಚಯ ಪತ್ರವನ್ನು ಕಡ್ಡಾಯವಾಗಿ ತರಬೇಕು.
2. ಕಳುಹಿಸಿದ ಪ್ರವೇಶ ಪತ್ರದಲ್ಲಿ ಯಾವುದೇ ಬದಲಾವಣೆಗಳಿದ್ದಲ್ಲಿ ಆ ಬಗ್ಗೆ ಸಂಸ್ಥೆಯ ಮುಖ್ಯಸ್ಥರಿಂದ ಪ್ರಮಾಣ ಪತ್ರವನ್ನು ತರಬೇಕು.
3. ಈ ಮೇಲ್ಕಂಡ ಸ್ಪರ್ಧೆಗಳಿಗೆ ಸಂಬಂಧಿಸಿದ ನಮೂನೆ, ನಿಬಂಧನೆಗಳು, ಸ್ಪರ್ಧೆ ನಡೆಯುವ ವೇಳೆ ಹಾಗೂ ಸ್ಥಳದ ವಿವರಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ವೈಬ್‌ಸೆಟ್‌ನಲ್ಲಿ ಪ್ರಕಟಿಸಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.

**ಗೆ,**

1. ವಿಶ್ವವಿದ್ಯಾನಿಲಯದ ಎಲ್ಲಾ ಅಂಗ/ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರು, ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು/ನಿರ್ದೇಶಕರು, ಮೈಸೂರು ಜಿಲ್ಲೆ, ಮೈಸೂರು
2. ನಿರ್ದೇಶಕರು, ಮಾಹಿತಿ ಮತ್ತು ಸಂವಹನ ವಿಭಾಗ (ಐ.ಸಿ.ಡಿ), ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು (ಈ ಮಾಹಿತಿಯನ್ನು ವಿ.ವಿ. ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ).
3. ಮಾನ್ಯ ಕುಲಪತಿಗಳ/ಕುಲಸಚಿವರ ಆಪ್ತಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆಗಳು : 0821-2419386**

# ಮೈಸೂರು ವಿಶ್ವವಿದ್ಯಾನಿಲಯ

(ನ್ಯಾಕ್ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ)

(ಎನ್.ಐ.ಆರ್.ಎಫ್–2024 : ರಾಜ್ಯ ಸಾರ್ವಜನಿಕ ವಿಶ್ವವಿದ್ಯಾನಿಲಯ ವರ್ಗದಲ್ಲಿ 19ನೇ ಸ್ಥಾನ ವಿಶ್ವವಿದ್ಯಾನಿಲಯ ವರ್ಗದಲ್ಲಿ 54ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 86ನೇ ಸ್ಥಾನ)

## ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು – 570006

ದೂರವಾಣಿ: 0821–2419318/386/429 e-mail : dswuommgm@gmail.com


2025–26ನೇ ಸಾಲಿನ ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮದಡಿಯಲ್ಲಿ ಈ ಕೆಳಕಂಡ ಸ್ಪರ್ಧೆಗಳನ್ನು ದಿನಾಂಕ 06–01–2025 ಮತ್ತು 07–01–2026 ರಂದು ಆಯೋಜಿಸಲಾಗಿದೆ.

1. ಶಾಸ್ತ್ರೀಯ ಹಾಡುಗಾರಿಕೆ
2. ಲಘು ಸಂಗೀತ (ಭಾವಗೀತೆ)
3. ಪಾಶ್ಚಾತ್ಯ ಸಂಗೀತ
4. ವೃಂದಗಾನ (ಭಾರತೀಯ)
5. ಜನಪದ ನೃತ್ಯ (ಭಾರತೀಯ)
6. ಶಾಸ್ತ್ರೀಯ ನೃತ್ಯ
7. ಚರ್ಚಾಸ್ಪರ್ಧೆ (ಇಂಗ್ಲೀಷ್) –ಪರ–ವಿರೋಧ
8. ಭಾಷಣ ಸ್ಪರ್ಧೆ (ಇಂಗ್ಲೀಷ್)
9. ರಸಪ್ರಶ್ನೆ ಸ್ಪರ್ಧೆ (ಕ್ವಿಜ್)
10. ಮೂಕಾಭಿನಯ
11. ಏಕಪಾತ್ರಾಭಿಯನ
12. ಸ್ಥಳದಲ್ಲಿ ಚಿತ್ರ ರಚನೆ
13. ಕಾಗದದ ಚೂರುಗಳಿಂದ ಚಿತ್ರ ರಚನೆ
14. ಭಿತ್ತಿಪತ್ರ ರಚನೆ
15. ಮಣ್ಣಿನ ಮಾದರಿ ರಚನೆ
16. ರಂಗೋಲಿ
17. ವ್ಯಂಗ್ಯ ಚಿತ್ರ ರಚನೆ

**ಈ ಮೇಲ್ಕಂಡ ಸ್ಪರ್ಧೆಗಳಿಗೆ ಸಂಬಂಧಿಸಿದ ನಮೂನೆ, ನಿಬಂಧನೆಗಳು, ಸ್ಪರ್ಧೆ ನಡೆಯುವ ವೇಳೆ ಹಾಗೂ ಸ್ಥಳದ ವಿವರಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ವೈಬ್‌ಸೆಟ್‌ನಲ್ಲಿ ಪ್ರಕಟಿಸಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.**

19/12/25

**ನಿರ್ದೇಶಕ**

DIRECTOR OF STUDENT WELFARE
UNIVERSITY OF MYSORE, MYSURU

# ಮೈಸೂರು ವಿಶ್ವವಿದ್ಯಾನಿಲಯ

(ನ್ಯಾಕ್ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ)

(ಎನ್.ಐ.ಆರ್.ಎಫ್–2024 : ರಾಜ್ಯ ಸಾರ್ವಜನಿಕ ವಿಶ್ವವಿದ್ಯಾನಿಲಯ ವರ್ಗದಲ್ಲಿ 19ನೇ ಸ್ಥಾನ ವಿಶ್ವವಿದ್ಯಾನಿಲಯ ವರ್ಗದಲ್ಲಿ 54ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 86ನೇ ಸ್ಥಾನ)

**ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು – 570006**

**ದೂರವಾಣಿ: 0821–2419318/386/429** e-mail : dswuommgm@gmail.com


**2025–26ನೇ ಸಾಲಿನ ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ವೇಳಾಪಟ್ಟಿ**

| | | | |
|---|---|---|---|
| **06–01–2026** | ಇ.ಎಂ.ಆರ್.ಸಿ. ಸಭಾಂಗಣ, ಮಾನಸಗಂಗೋತ್ರಿ, ಮೈಸೂರು | ಮ: 2.00 | ಲಘು ಸಂಗೀತ (ಭಾವಗೀತೆ) |
| | | ಮ: 4.00 | ವೃಂದಗಾನ (ಭಾರತೀಯ) |
| | | ಮ: 3.00 | ಭಿತ್ತಿ ಪತ್ರ ರಚನೆ |
| | ಲಲಿತ ಕಲೆಗಳ ಕಾಲೇಜು ಸಭಾಂಗಣ, ಮಾನಸಗಂಗೋತ್ರಿ, ಮೈಸೂರು | ಮ: 12.30 | ಮೂಕಾಭಿನಯ ಸ್ಪರ್ಧೆ |
| | | ಮ: 2.30 | ಸ್ಥಳದಲ್ಲಿ ಚಿತ್ರ ರಚನೆ |
| | | ಮ: 2.30 | ಜಾನಪದ ನೃತ್ಯ |
| | ಐನ್‌ಸ್ಟೀನ್ ಸಭಾಂಗಣ, ಭೌತಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು | ಮ: 12.30 | ಪಾಶ್ಚಾತ್ಯ ಸಂಗೀತ |
| | | ಮ: 4.30 | ರಸ ಪ್ರಶ್ನೆ |
| **07–01–2026** | ಇ.ಎಂ.ಆರ್.ಸಿ. ಸಭಾಂಗಣ, ಮಾನಸಗಂಗೋತ್ರಿ, ಮೈಸೂರು | ಮ: 10:00 | ವ್ಯಂಗ್ಯ ಚಿತ್ರ ರಚನೆ |
| | | ಮ: 12.30 | ಏಕಪಾತ್ರಾಭಿನಯ |
| | | ಮ: 1.00 | ಕಾಗದದ ಚೂರುಗಳಿಂದ ಚಿತ್ರ ರಚನೆ |
| | ಲಲಿತ ಕಲೆಗಳ ಕಾಲೇಜು ಸಭಾಂಗಣ, ಮಾನಸಗಂಗೋತ್ರಿ, ಮೈಸೂರು | ಬೆ: 9.00 | ಶಾಸ್ತ್ರೀಯ ನೃತ್ಯ |
| | | ಬೆ: 9.30 | ಮಣ್ಣಿನ ಮಾದರಿ ರಚನೆ |
| | | ಮ: 12.30 | ರಂಗೋಲಿ |
| | | ಮ: 12.30 | ಶಾಸ್ತ್ರೀಯ ಹಾಡುಗಾರಿಕೆ |
| | ಐನ್‌ಸ್ಟೀನ್ ಸಭಾಂಗಣ, ಭೌತಶಾಸ್ತ್ರ ಅಧ್ಯಯನ ವಿಭಾಗ ಮಾನಸಗಂಗೋತ್ರಿ, ಮೈಸೂರು | ಬೆ: 9.00 | ಇಂಗ್ಲೀಷ್ ಚರ್ಚಾ ಸ್ಪರ್ಧೆ |
| | | ಮ: 12.00 | ಇಂಗ್ಲೀಷ್ ಭಾಷಣ ಸ್ಪರ್ಧೆ |

ವಿಶೇಷ ಸೂಚನೆ:

1. ವಿದ್ಯಾರ್ಥಿಗಳು ಮುಂಚಿತವಾಗಿಯೇ ಸಿದ್ಧರಾಗಿ, ನಿಗದಿತ ವೇಳೆಗೆ ಸ್ಪರ್ಧೆಗಳಲ್ಲಿ ಭಾಗವಹಿಸಿ, ಸ್ಪರ್ಧೆಗಳನ್ನು ಆಯಾಯ ಸಮಯಕ್ಕೆ ತಕ್ಕಂತೆ ನಡೆಸಲು ಅನುಕೂಲವಾಗುವಂತೆ ಸಹಕಾರ ನೀಡುವುದು.
2. ಚರ್ಚಾ ಸ್ಪರ್ಧೆ ಹಾಗೂ ಭಾಷಣ ಸ್ಪರ್ಧೆಯ ವಿಷಯವನ್ನು ಸ್ಪರ್ಧೆಗೆ 24 ಗಂಟೆ ಮುಂಚಿತವಾಗಿ ಪ್ರಕಟಿಸಲಾಗುವುದು.
3. ಅನಿವಾರ್ಯ ಕಾರಣಗಳಿಂದ ವೇಳೆ, ಸ್ಥಳ ಬದಲಾವಣೆಯಾದರೆ ಸ್ಥಳದಲ್ಲೇ ಪ್ರಕಟಿಸಲಾಗುವುದು.
4. ಯಾವುದೇ ಸ್ಪರ್ಧೆಗೆ ಮೂರಕ್ಕಿಂತ ಕಡಿಮೆ ಸ್ಪರ್ಧಿಗಳು ಅಥವಾ ತಂಡಗಳು ಇದ್ದಲ್ಲಿ, ಅಂತಹ ಸ್ಪರ್ಧೆಯನ್ನು ರದ್ದುಪಡಿಸಲಾಗುವುದು.
5. ತೀರ್ಪುಗಾರರ ತೀರ್ಮಾನವೇ ಅಂತಿಮವಾಗಿರುತ್ತದೆ.
6. ಸ್ಪರ್ಧೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಕಾಲೇಜಿನ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರಬೇಕು ಹಾಗೂ ಒಂದು ಜೆರಾಕ್ಸ್ ಪ್ರತಿಯನ್ನು ನೀಡಬೇಕು.
7. ಯಾವುದೇ ಸಾಂಸ್ಕೃತಿಕ ಹಾಗೂ ಸಾಹಿತ್ಯಕ ಸ್ಪರ್ಧೆಗಳಲ್ಲಿ ಜಾತಿ, ಭಾಷೆ ಹಾಗೂ ಧರ್ಮಕ್ಕೆ ಧಕ್ಕೆಯಾಗುವಂತಹ ಪದಗಳನ್ನು ಬಳಸಬಾರದು. ಒಂದು ವೇಳೆ ಅಂತಹ ಪದಗಳನ್ನು ಬಳಸಿದಲ್ಲಿ ಅವರ ಮೇಲೆ ಶಿಸ್ತು ಕ್ರಮವನ್ನು ತಕ್ಷಣವೇ ಜರುಗಿಸಲಾಗುವುದು.
8. ಉದ್ಘಾಟನಾ ಸಮಾರಂಭವನ್ನು ದಿನಾಂಕ 06–01–2026ರಂದು ಬೆಳಗ್ಗೆ 10.00 ಗಂಟೆಗೆ ಇ.ಎಂ.ಆರ್.ಸಿ. ಸಭಾಂಗಣ ಮಾನಸಗಂಗೋತ್ರಿ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ಎಲ್ಲರೂ ಕಡ್ಡಾಯವಾಗಿ ಹಾಜರಾಗಬೇಕೆಂದು ಕೋರಿದೆ.

DIRECTOR OF STUDENT WELFARE
UNIVERSITY OF MYSORE, MYSURU

# ಮೈಸೂರು ವಿಶ್ವವಿದ್ಯಾನಿಲಯ

## ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ ಮಾನಸಗಂಗೋತ್ರಿ, ಮೈಸೂರು

## ವಿಶ್ವವಿದ್ಯಾನಿಲಯ ಮಟ್ಟದ ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು

ಕಾಲೇಜು/ ಸ್ನಾತಕೋತ್ತರ ವಿಭಾಗ..........................................................................................................

ಹೆಸರು ಮತ್ತು ವಿಳಾಸ.........................................................................................................................

| ಕ್ರ.ಸಂ | ಸ್ಪರ್ಧೆಗಳ ಹೆಸರು | ಸ್ಪರ್ಧಿಗಳ ಸಂಖ್ಯೆ | ವಿದ್ಯಾರ್ಥಿಯ ಹೆಸರು | ಓದುತ್ತಿರುವ ತರಗತಿ | ಹುಟ್ಟಿದ ದಿನಾಂಕ |
|---|---|---|---|---|---|
| 1 | 2 | 3 | 4 | 5 | 6 |
| 1. | ಶಾಸ್ತ್ರೀಯ ಹಾಡುಗಾರಿಕೆ | 1 | | | |
| 2. | ಲಘು ಸಂಗೀತ | 1 | | | |
| 3. | ಪಾಶ್ಚಾತ್ಯ ಸಂಗೀತ | 1 | | | |
| 4. | ಜಾನಪದ ನೃತ್ಯ (ಭಾರತೀಯ) (ಹತ್ತು ಜನ) | 1 | | | |
| | | 2 | | | |
| | | 3 | | | |
| | | 4 | | | |
| | | 5 | | | |
| | | 6 | | | |
| | | 7 | | | |
| | | 8 | | | |
| | | 9 | | | |
| | | 10 | | | |
| 5. | ವೃಂದಗಾನ (ಭಾರತೀಯ) (ಆರು ಜನ) | 1 | | | |
| | | 2 | | | |
| | | 3 | | | |
| | | 4 | | | |
| | | 5 | | | |
| | | 6 | | | |
| 6. | ಶಾಸ್ತ್ರೀಯ ನೃತ್ಯ | 1 | | | |

| 1 | 2 | 3 | 4 | 5 | 6 |
|---|---|---|---|---|---|
| 7. | ಚರ್ಚಾ ಸ್ಪರ್ಧೆ (ಇಂಗ್ಲೀಷ್)– ಪರ | 1 | | | |
| | – ವಿರೋಧ | 1 | | | |
| 8. | ಭಾಷಣ ಸ್ಪರ್ಧೆ (ಇಂಗ್ಲೀಷ್) | 1 | | | |
| 9. | ರಸ ಪ್ರಶ್ನೆ ಸ್ಪರ್ಧೆ (ಕ್ವಿಜ್) (ಮೂರು ಜನ) | 1 | | | |
| | | 2 | | | |
| | | 3 | | | |
| 10. | ಮೂಕಾಭಿನಯ (ಆರು ಜನ) | 1 | | | |
| | | 2 | | | |
| | | 3 | | | |
| | | 4 | | | |
| | | 5 | | | |
| | | 6 | | | |
| 11. | ಏಕಪಾತ್ರಾಭಿನಯ | 1 | | | |
| 12. | ಸ್ಥಳದಲ್ಲಿ ಚಿತ್ರ ರಚನೆ | 1 | | | |
| 13. | ಕಾಗದದ ಚೂರುಗಳಿಂದ ಚಿತ್ರ ರಚನೆ | 1 | | | |
| 14. | ಭಿತ್ತಿ ಪತ್ರ ರಚನೆ | 1 | | | |
| 15. | ಮಣ್ಣಿನ ಮಾದರಿ ರಚನೆ | 1 | | | |
| 16. | ವ್ಯಂಗ್ಯಚಿತ್ರ ರಚನೆ | 1 | | | |
| 17. | ರಂಗೋಲಿ | 1 | | | |

ಐದು ಜನ ಸಹ ಕಲಾವಿದರು ಮತ್ತು ಒಬ್ಬರು ಮ್ಯಾನೇಜರ್, ತಂಡದಲ್ಲಿ ವಿದ್ಯಾರ್ಥಿನಿಯರು ಇದ್ದಲ್ಲಿ ಒಬ್ಬರು ಮಹಿಳಾ ಮ್ಯಾನೇಜರ್ ಇವರುಗಳ ಹೆಸರು ಮತ್ತು ವಿಳಾಸಗಳನ್ನು ಪ್ರವೇಶಾತಿ ಜೊತೆ ಕಳುಹಿಸುವುದು.

ವಿಭಾಗದ ಮುಖ್ಯಸ್ಥರು/ಪ್ರಾಂಶುಪಾಲರ ಸಹಿ

(ಮೊಹರಿನೊಂದಿಗೆ)

# <u>ದೃಢೀಕರಣ ಪತ್ರ</u>

ಈ ಪ್ರವೇಶ ಪತ್ರದಲ್ಲಿ ನಮೂದಿಸಿರುವ ಶ್ರೀ/ಕು.........................................ಎಂಬ ವಿದ್ಯಾರ್ಥಿಯು ಈ ಕಾಲೇಜು/ಸ್ನಾತಕೋತ್ತರ ವಿಭಾಗದಲ್ಲಿ....................................ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಈ ವಿದ್ಯಾರ್ಥಿಯ ವಯಸ್ಸು ದಿನಾಂಕ .....................................ಕ್ಕೆ 25 ವರ್ಷಗಳಿಗಿಂತ ಕಡಿಮೆ ಇರುತ್ತದೆ.

ಪ್ರಾಂಶುಪಾಲರು/ವಿಭಾಗದ ಮುಖ್ಯಸ್ಥರು
(ಕಾಲೇಜು/ಸ್ನಾತಕೋತ್ತರ ವಿಭಾಗ/ಕೇಂದ್ರದ ಮುದ್ರೆ ಮತ್ತು ಸಹಿ)

ವಿ.ಸೂ.: ದೃಢೀಕರಣ ಪತ್ರಗಳನ್ನು ಪ್ರತಿ ವಿದ್ಯಾರ್ಥಿಗೂ ಪ್ರತ್ಯೇಕವಾಗಿ ಕಳುಹಿಸಿಕೊಡಬೇಕು.

*******

**<u>ವಿಶೇಷ ಸೂಚನೆ :</u>**

1. ಒಂದು ಕಾಲೇಜಿನ/ಸ್ನಾತಕೋತ್ತರ ವಿಭಾಗದ ತಂಡದೊಡನೆ ಎಲ್ಲಾ ಸ್ಪರ್ಧೆಗಳಿಗೂ ಸೇರಿ ಐದು ಜನ ಸಹ ಕಲಾವಿದರಿಗೆ ಮಾತ್ರ ಅವಕಾಶವಿದೆ. ಸಹ ಕಲಾವಿದರು ವಿದ್ಯಾರ್ಥಿಗಳಾಗಿರುವುದು ಉತ್ತಮ. ಇಲ್ಲವಾದಲ್ಲಿ ಹೊರಗಿನವರಾಗಿರಬಹುದು.
2. ಸ್ಪರ್ಧೆಗಳಿಗೆ ಅವಶ್ಯಕವಾದ ವಾದ್ಯ, ಉಡುಪು, ಬಣ್ಣ ಮತ್ತಿತರ ಸಲಕರಣೆಗಳನ್ನು ಸ್ಪರ್ಧಿಗಳೇ ತರಬೇಕು.
3. ಸ್ಪರ್ಧೆಗಳಿಗೆ ಯಾವ ವಿಶೇಷ ರಂಗಸಜ್ಜಿಕೆಯನ್ನಾಗಲೀ, ಬೆಳಕಿನ ವ್ಯವಸ್ಥೆಯನ್ನಾಗಲೀ ಒದಗಿಸಲಾಗುವುದಿಲ್ಲ.
4. ಸೀಮಿತ ಸಂಖ್ಯೆಯ ಮೈಕು ಮತ್ತು ಪೀಠೋಪಕರಣಗಳನ್ನು ಮಾತ್ರ ಒದಗಿಸಲಾಗುವುದು.
5. ಸಹ ಕಲಾವಿದರಿಗೆ ಬಹುಮಾನ ಮತ್ತು ಅರ್ಹತಾ ಪತ್ರಗಳನ್ನು ನೀಡಲಾಗುವುದಿಲ್ಲ.
6. ತಂಡದ ವಿವರಗಳನ್ನು ಕಡ್ಡಾಯವಾಗಿ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆ–1 ರಲ್ಲಿ ಭರ್ತಿಮಾಡಿ ಕಳುಹಿಸಿಕೊಡಬೇಕು. ಇಲ್ಲವಾದಲ್ಲಿ ಸ್ಪರ್ಧೆಯಲ್ಲಿ ಭಾಗವಹಿಸಲು ತಮ್ಮ ವಿದ್ಯಾರ್ಥಿಗಳಿಗೆ ಅವಕಾಶವನ್ನು ನೀಡಲಾಗುವುದಿಲ್ಲ. ಈ ಬಗ್ಗೆ ವಿಭಾಗದ ಮುಖ್ಯಸ್ಥರು/ಪ್ರಾಂಶುಪಾಲರು ತಮ್ಮ ವೈಯಕ್ತಿಕ ಗಮನವನ್ನು ಹರಿಸುವುದು.
7. ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ವಯಸ್ಸಿನ ಧೃಡೀಕರಣದ ಜೊತೆಗೆ ಕಾಲೇಜಿನ ಗುರುತಿನ ಚೀಟಿಯನ್ನು ಹಾಗೂ ಸ್ಪರ್ಧೆಗೆ ಭಾಗವಹಿಸಲು ನಮೂನೆ–1 ರಲ್ಲಿ ತಮ್ಮ ಹೆಸರನ್ನು ದಾಖಲಿಸಿ ತರಬೇಕು (ಇದು ಕಡ್ಡಾಯ).

ಸಹಿ/–

ನಿರ್ದೇಶಕ

# ಮೈಸೂರು ವಿಶ್ವವಿದ್ಯಾನಿಲಯ

ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು

## ಮೈಸೂರು ವಿಶ್ವವಿದ್ಯಾನಿಲಯ ಮಟ್ಟದ 2025-26ನೇ ಶೈಕ್ಷಣಿಕ ಸಾಲಿನ ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ವಿವರ ಮತ್ತು ನಿಯಮಾವಳಿಗಳು

### 1 ಶಾಸ್ತ್ರೀಯ ಹಾಡುಗಾರಿಕೆ

ಒಂದು ಕಾಲೇಜು/ ಸ್ನಾತಕೋತ್ತರ ವಿಭಾಗದಿಂದ ಒಬ್ಬ ಸ್ಪರ್ಧಿಗೆ ಮಾತ್ರ ಅವಕಾಶವಿದೆ. ಇದಕ್ಕೆ ಸಂಬಂಧಿಸಿದಂತೆ ಇಬ್ಬರು ಸಹ ಕಲಾವಿದರ ನೆರವನ್ನು ಪಡೆಯಬಹುದು. ಪ್ರತಿ ಸ್ಪರ್ಧಿಗೂ 15 ನಿಮಿಷಗಳ ಕಾಲಾವಕಾಶ ಮಾತ್ರವಿರುತ್ತದೆ. ಹಿಂದೂಸ್ಥಾನಿ ಅಥವಾ ಕರ್ನಾಟಕ ಸಂಗೀತವನ್ನು ಮಾತ್ರ ಹಾಡಬೇಕು (ಚಿತ್ರಗೀತೆಗಳನ್ನು ಹಾಡುವಂತಿಲ್ಲ). ಸ್ವರ, ತಾಳ, ರಾಗ ಮತ್ತು ಕೃತಿಗಳ ಆಯ್ಕೆ ಹಾಗೂ ಒಟ್ಟಾರೆ ಪರಿಣಾಮಗಳ ಆಧಾರದ ಮೇಲೆ ತೀರ್ಪು ನೀಡಲಾಗುವುದು.

### 2 ಲಘು ಸಂಗೀತ (ಭಾವಗೀತೆ)

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ ಒಬ್ಬ ಸ್ಪರ್ಧಿಗೆ ಮಾತ್ರ ಅವಕಾಶವಿದೆ ಹಾಗೂ ಇಬ್ಬರು ಸಹ ಕಲಾವಿದರ ನೆರವು ಪಡೆಯಬಹುದಾಗಿದೆ. ಪ್ರತಿ ಸ್ಪರ್ಧಿಗೂ 6 ನಿಮಿಷಗಳವರೆಗೆ ಮಾತ್ರ ಕಾಲಾವಕಾಶವಿದೆ. ಪ್ರಸಿದ್ಧ ಕನ್ನಡ ಕವಿಗಳ ಗೀತೆಗಳನ್ನು ಮಾತ್ರ ಆರಿಸಿಕೊಳ್ಳಬೇಕು. ಸ್ವರ, ತಾಳ, ಕೃತಿಗಳ ಆಯ್ಕೆ ಹಾಗೂ ಒಟ್ಟಾರೆ ಪರಿಣಾಮದ ಆಧಾರದ ಮೇಲೆ ತೀರ್ಪು ನೀಡಲಾಗುವುದು.

### 3 ಪಾಶ್ಚಾತ್ಯ ಸಂಗೀತ

ಒಂದು ಕಾಲೇಜು / ಸ್ನಾತ್ತಕೋತ್ತರ ವಿಭಾಗದಿಂದ ಒಬ್ಬ ಸ್ಪರ್ಧಿಗೆ ಮಾತ್ರ ಅವಕಾಶವಿದೆ ಹಾಗೂ ಇಬ್ಬರು ಸಹ ಕಲಾವಿದರ ನೆರವು ಪಡೆಯಬಹುದಾಗಿದೆ. ಪ್ರತಿ ಸ್ಪರ್ಧಿಗೂ 6 ನಿಮಿಷಗಳ ಕಾಲಾವಕಾಶವಿದೆ. ಇಂಗ್ಲೀಷ್ ಗೀತೆಗಳನ್ನು ಮಾತ್ರ ಹಾಡಬೇಕು. ತಾಳಬದ್ಧವಾದ ಸುಸಂಬದ್ಧವಾದ ಕೃತಿಗಳ ಆಯ್ಕೆ ಹಾಗೂ ಒಟ್ಟಾರೆ ಪರಿಣಾಮದ ಆಧಾರದ ಮೇಲೆ ತೀರ್ಪು ನೀಡಲಾಗುವುದು.

### 4 ವೃಂದಗಾನ (ಭಾರತೀಯ)

ಒಂದು ಕಾಲೇಜು / ಸ್ನಾತ್ತಕೋತ್ತರ ವಿಭಾಗದಿಂದ ಆರು ಸ್ಪರ್ಧಿಗಳಿರುವ ಒಂದು ತಂಡಕ್ಕೆ ಮಾತ್ರ ಅವಕಾಶವಿದೆ. ಜೊತೆಗೆ ಮೂರು ಜನ ವಾದಕರನ್ನು ಸಹ ಕಲಾವಿದರನ್ನಾಗಿ ಸೇರಿಸಿಕೊಳ್ಳಬಹುದು. ಕನ್ನಡ ಅಥವಾ ಹಿಂದಿ ಭಾಷೆಯ ಎರಡು ಗೀತೆಗಳನ್ನು ಹಾಡಲು ಅವಕಾಶವಿದೆ. ಚಿತ್ರಗೀತೆಯನ್ನು ಪ್ರಸ್ತುತಪಡಿಸುವಂತಿಲ್ಲ. ಪ್ರತಿ ತಂಡಕ್ಕೆ 10 ನಿಮಿಷಗಳ ಕಾಲಾವಕಾಶವಿದ್ದು, ನಾಲ್ಕು ನಿಮಿಷಗಳಿಗೆ ಮೀರದಂತೆ ಸಿದ್ದತೆಯ ಸಮಯವನ್ನು ಬಳಸಿಕೊಳ್ಳಬಹುದು. ಹಾಡುಗಾರಿಕೆಯ ಗುಣಮಟ್ಟಕ್ಕೆ ಪ್ರಾಧಾನ್ಯತೆ ನೀಡಲಾಗುವುದಲ್ಲದೆ, ಅಲಂಕಾರ ವೇಷಭೂಷಣ ಅಥವಾ ನಾಟಕೀಯತೆಯನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ (ಒಂದು ರಾಷ್ಟ್ರ ಭಕ್ತಿಗೀತೆ ಹಾಗೂ ಒಂದು ಜನಪದ ಗೀತೆಯನ್ನ ಕಡ್ಡಾಯವಾಗಿ ಹಾಡಬೇಕು).

### 5 ಜನಪದ ನೃತ್ಯ (ಭಾರತೀಯ)

ಒಂದು ಕಾಲೇಜು / ಸ್ನಾತ್ತಕೋತ್ತರ ವಿಭಾಗದಿಂದ 10 ವಿದ್ಯಾರ್ಥಿಗಳಿರುವ ಒಂದು ತಂಡಕ್ಕೆ ಮಾತ್ರ ಅವಕಾಶವಿದೆ ಹಾಗೂ 5 ಜನ ವಾದಕರನ್ನು ಸಹ ಕಲಾವಿದರನ್ನಾಗಿ ಸೇರಿಸಿಕೊಳ್ಳಬಹುದಾಗಿದೆ. ಪ್ರತಿ ತಂಡಕ್ಕೆ 10 ನಿಮಿಷಗಳ ಕಾಲಾವಕಾಶ ಮಾತ್ರವಿರುತ್ತದೆ. ಯಾವುದಾದರೂ ಪ್ರಾದೇಶಿಕ ಜನಪದ ನೃತ್ಯ ಅಥವಾ ಪ್ರಾಚೀನ ನೃತ್ಯವನ್ನು ಮಾತ್ರ ಪ್ರದರ್ಶಿಸಬೇಕು (ಪಟಾಕುಣಿತ, ಪೂಜಾಕುಣಿತ, ಗೊರವರ ನೃತ್ಯ, ಬೀಸು ಕಂಸಾಳೆ, ಸೋಮನ ಕುಣಿತ, ಲಿಂಗದ ಬೀರರ ಕುಣಿತ [ವೀರಭದ್ರನ ನೃತ್ಯ], ಕೋಲಾಟ, ಕೀಲುಕುದುರೆ ಕುಣಿತ, ಮಾರೀ ಕುಣಿತ, ಭಾಗವಂತಿಕೆ ಮೇಳ ಮತ್ತು ತಮಟೆ ಮೇಳ ಮುಂತಾದವುಗಳು) ಎಲ್ಲರೂ ವಿದ್ಯಾರ್ಥಿಗಳಾಗಿರಬಹುದು ಅಥವಾ ವಿದ್ಯಾರ್ಥಿನಿಯರಾಗಿರಬಹುದು. ಇಲ್ಲವೆ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಂದ ಕೂಡಿರಬಹುದು. ನೃತ್ಯದ ತಾಳಬದ್ಧತೆ, ಅಭಿವ್ಯಕ್ತಿ, ಉಡುಪು, ಅಲಂಕಾರ ರಂಗಸಜ್ಜಿಕೆ, ಸಂಯೋಜನೆ ಮತ್ತು ಒಟ್ಟಾರೆ ಪರಿಣಾಮಗಳನ್ನು ಆಧರಿಸಿ ತೀರ್ಪು ನೀಡಲಾಗುವುದು. ಶಾಸ್ತ್ರೀಯ ನೃತ್ಯಕ್ಕೆ ಅವಕಾಶವಿಲ್ಲ. ರೆಕಾರ್ಡ್ ಸಂಗೀತ ಉಪಯೋಗಿಸುವಂತಿಲ್ಲ. ಅಂತರ ಕಾಲೇಜು ಸ್ಪರ್ಧೆಗಳಲ್ಲಿ ಪ್ರಥಮ/ದ್ವಿತೀಯ/ತೃತೀಯ ಸ್ಥಾನ ಗಳಿಸಿದರೂ ಸಹ ಯುವಜನೋತ್ಸವ ತಂಡದಲ್ಲಿ ಎಲ್ಲಾ ಸ್ಪರ್ಧಿಗಳಿಗೂ ಸ್ಥಾನ ನೀಡಲಾಗುವುದಿಲ್ಲ.

6. ಶಾಸ್ತ್ರೀಯ ನೃತ್ಯ:

ಒಂದು ಕಾಲೇಜು / ಸ್ನಾತ್ತಕೋತ್ತರ ವಿಭಾಗದಿಂದ ಒಬ್ಬ ಸ್ಪರ್ಧಿಗೆ ಮಾತ್ರ ಅವಕಾಶವಿರುತ್ತದೆ. ಮತ್ತು ಗಾಯಕರು ಸೇರಿದಂತೆ 3 ಸಹ ಕಲಾವಿದರ ನೆರವು ಪಡೆಯಲು ಅವಕಾಶವಿದೆ. ಸ್ಪರ್ದಿಗಳು ಕಥಕ್, ಕಥಕ್ಕಳಿ, ಭರತನಾಟ್ಯ, ಮಣಿಪುರಿ, ಕೂಚುಪುಡಿ, ಮೋಹಿನಿಯಾಟ್ಟಂ, ನೃತ್ಯ ಪ್ರಕಾರಗಳಲ್ಲಿ ಒಂದನ್ನು ಪ್ರದರ್ಶಿಸಬಹುದು ಪ್ರತಿ ಸ್ಪರ್ದಿಗೂ ಸಿದ್ದತೆ, ಪ್ರವೇಶ ಹಾಗೂ ನಿರ್ಗಮನಗಳನ್ನೊಳಗೊಂಡಂತೆ 15 ನಿಮಿಷಗಳ ಕಾಲಾವಕಾಶವಿರುತ್ತದೆ, ತಾಳ, ಅಭಿನಯ, ಉಡುಪು, ಅಲಂಕಾರ, ಪಾದಚಲನೆ ಹಾಗೂ ಒಟ್ಟಾರೆ ಪರಿಣಾಮಗಳ ಆಧಾರದ ಮೇಲೆ ತೀರ್ಪು ನೀಡಲಾಗುವುದು. ರೆಕಾರ್ಡ್ ಸಂಗೀತ ಉಪಯೋಗಿಸುವಂತಿಲ್ಲ.

7. ಚರ್ಚಾ ಸ್ಪರ್ದೆ (ಇಂಗ್ಲೀಷ್)

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ ಇಂಗ್ಲೀಷ್ ಚರ್ಚಾಸ್ಪರ್ಧೆಗಳಿಗೆ ತಲಾ ಇಬ್ಬರಂತೆ ಸ್ಪರ್ದಿಗಳಿಗೆ ಅವಕಾಶವಿರುತ್ತದೆ. ತಂಡದ ಉಪಸ್ಪರ್ಧಿಯು ವಿಷಯದ ಪರವಾಗಿಯೂ ಮತ್ತೊಬ್ಬರು ವಿರೋಧವಾಗಿಯೂ ಮಾತನಾಡಬೇಕು. ವಿಷಯದ ಪರವಾಗಿ ಮತ್ತು ವಿರೋದವಾಗಿ ಮಾತನಾಡುವವರ ಹೆಸರನ್ನು ಪ್ರವೇಶ ಪತ್ರದಲ್ಲಿಯೇ ಸೂಚಿಸಿರಬೇಕು ಮತ್ತು ಅವನ್ನು ಬದಲಾಯಿಸಲು ಅವಕಾಶವಿರುವುದಿಲ್ಲ. ಸ್ಪರ್ಧೆಯ ವಿಷಯನ್ನು, ಸ್ಪರ್ಧೆ ಪ್ರಾರಂಭವಾಗುವ 24 ಗಂಟೆಗಳಿಗಿಂತ ಮುಂಚೆ ಪ್ರಕಟಿಸಲಾಗುವುದು. ಪ್ರತಿ ಸ್ಪರ್ಧಿಗೂ 4+1 ನಿಮಿಷಗಳ ಕಾಲಾವಕಾಶವನ್ನು ಮಾತ್ರ ನೀಡಲಾಗುವುದು ಚಿಂತನೆ, ವಿಷಯ ಪ್ರತಿಪಾದನೆ, ಸ್ವಂತಿಕೆ, ಭಾಷಾ ಅಭಿವ್ಯಕ್ತಿ ಹಾಗೂ ಒಟ್ಟಾರೆ ಪರಿಣಾಮಗಳ ಆಧಾರದ ಮೇಲೆ ತೀರ್ಪು ನೀಡಲಾಗುವುದು.

8. ಭಾಷಣ ಸ್ಪರ್ಧೆ (ಇಂಗ್ಲೀಷ್ )

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ, ಇಂಗ್ಲೀಷ್ ಭಾಷಣ ಸ್ಪರ್ಧೆಗೆ ತಲಾ ಒಬ್ಬ ಸ್ಪರ್ಧಿಗೆ ಮಾತ್ರ ಅವಕಾಶವಿರುತ್ತದೆ. ಸ್ಪರ್ಧೆಯ ವಿಷಯವನ್ನು ಸ್ಪರ್ಧೆ ಪ್ರಾರಂಭವಾಗುವ 24 ಗಂಟೆಗಳ ಮುಂಚೆ ಪ್ರಕಟಿಸಲಾಗುವುದು. ಪ್ರತಿ ಸ್ಪರ್ದಿಗೂ 4+1 ನಿಮಿಷಗಳ ಕಾಲಾವಕಾಶವಿರುತ್ತದೆ. ವಿಷಯ ಪ್ರತಿಪಾದನೆ, ವಾಕ್ಚಾತುರ್ಯ ಮತ್ತು ಒಟ್ಟಾರೆ ಪರಿಣಾಮಗಳನ್ನು ಆಧರಿಸಿ, ತೀರ್ಪು ನೀಡಲಾಗುವುದು.

9. ರಸಪ್ರಶ್ನೆ ಸ್ಪರ್ಧೆ (ಕ್ವಿಜ್)

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ ಮೂವರು ಸ್ಪರ್ಧಿಗಳಿರುವ ಒಂದು ತಂಡಕ್ಕೆ ಮಾತ್ರ ಅವಕಾಶವಿರುತ್ತದೆ. ಬರವಣಿಗೆಯಲ್ಲಿ ನಡೆಯುವ ಪ್ರಾಥಮಿಕ ಸುತ್ತಿನಿಂದ ನಾಲ್ಕು ತಂಡಗಳನ್ನು ಮಾತ್ರ ಅಂತಿಮ ಸುತ್ತಿಗೆ ಆಯ್ಕೆ ಮಾಡಲಾಗುವುದು. ಅಂತಿಮ ಸುತ್ತಿನಲ್ಲಿ ಮೌಖಿಕ ಪ್ರಶ್ನೆಗಳು ಹಾಗೂ ದೃಶ್ಯ ಶ್ರವಣ ಪ್ರಶ್ನೆಗಳು ಇರುತ್ತವೆ. ಸ್ಪರ್ಧೆಯ ನಿರ್ದಿಷ್ಟ ನಿಯಮಗಳನ್ನು, ಮೌಲ್ಯಮಾಪನ ವಿಧಾನವನ್ನು, ಪ್ರತಿ ಉತ್ತರಕ್ಕೂ ಇರುವ ಕಾಲಾವಕಾಶ ಮುಂತಾದುವನ್ನು ಸ್ಪರ್ಧೆ ಪ್ರಾರಂಭವಾಗುವ ಮುನ್ನ ತಿಳಿಸಲಾಗುವುದು.

10. ಮೂಕಾಭಿನಯ (ಮೈಮ್)

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ 6 ಜನರಿರುವ ಒಂದು ತಂಡಕ್ಕೆ ಮಾತ್ರ ಪ್ರವೇಶಾವಕಾಶವಿದೆ. ಪ್ರತಿ ತಂಡಕ್ಕೆ 5 ನಿಮಿಷಗಳ ಕಾಲಾವಕಾಶ ಮಾತ್ರವಿರುತ್ತದೆ. ಹಾಗೂ ಇಬ್ಬರೂ ಸಹ ಕಲಾವಿದರ ನೆರವವನ್ನು ಪಡೆಯಬಹುದು. ಆಲೋಚನೆ ಹಾಗೂ ಕಲ್ಪನಾ ಸಾಮಾರ್ಥ್ಯ, ಅಲಂಕರಣ, ವೇಷಭೂಷಣ ಮತ್ತು ಒಟ್ಟಾರೆ ಪರಿಣಾಮಗಳ ಆಧಾರದ ಮೇಲೆ ತೀರ್ಪು ನೀಡಲಾಗುವುದು (ಸಾರಾಂಶದ 3 ಪ್ರತಿಯನ್ನು 1 ಗಂಟೆ ಮುಂಚೆ ಸಲ್ಲಿಸಬೇಕು).

11. ಏಕಪಾತ್ರಾಭಿನಯ

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ ಒಬ್ಬ ಸ್ಪರ್ಧಿಗೆ ಮಾತ್ರ ಅವಕಾಶವಿರುತ್ತದೆ. ಪ್ರತಿ ಸ್ಪರ್ಧಿಗೂ 5 ನಿಮಿಷಗಳ ಕಾಲಾವಕಾಶ ನೀಡಲಾಗುವುದು. ಸ್ಪರ್ಧಿಯು ತನಗೆ ಬೇಕಾದ ಉಡುಪು ಇತ್ಯಾದಿಗಳನ್ನು ತಾವೇ ತರಬೇಕು. ತಕ್ಷಣದ ಪ್ರತಿಕ್ರಿಯೆ, ಅಭಿನಯ ಮತ್ತು ವಿಷಯದ ಆಧಾರ ಮತ್ತು ಒಟ್ಟು ಪರಿಣಾಮದ ಆಧಾರದ ಮೇಲೆ ತೀರ್ಪು ನೀಡಲಾಗುವುದು.

12. ಚಿತ್ರ ರಚನೆ

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ ಒಬ್ಬ ಸ್ಪರ್ಧಿಗೆ ಮಾತ್ರ ಅವಕಾಶವಿದೆ. ತಮಗೆ ಇಷ್ಟವಾದ ವಿಷಯವನ್ನು ಕುರಿತು ಸ್ಥಳದಲ್ಲಿಯೇ ಚಿತ್ರ ಬರೆಯಬೇಕು. ಪ್ರತಿ ಸ್ಪರ್ಧಿಗೂ 02 ಗಂಟೆ 30 ನಿಮಿಷಗಳ ಕಾಲಾವಕಾಶ ನೀಡಲಾಗುವುದು. ಪ್ರತಿ ಸ್ಪರ್ಧಿ ತನಗೆ ಅವಶ್ಯಕವಾದ ಬಣ್ಣ, ಬ್ರಶ್, ಬರೆಯುವ ಹಲಗೆಗಳನ್ನು ತಾವೇ ತರಬೇಕು. ಕಾಗದವನ್ನು ಮಾತ್ರ ನೀಡಲಾಗುವುದು, ಸಹಾಯಕರಿಗೆ ಅವಕಾಶವಿಲ್ಲ.

13. ಕಾಗದದ ಚೂರುಗಳಿಂದ ಚಿತ್ರ ರಚನೆ (ಕೊಲಾಜ್)

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ ಒಬ್ಬ ಸ್ಪರ್ಧಿಗೆ ಮಾತ್ರ ಅವಕಾಶವಿರುತ್ತದೆ. ವಿಷಯನ್ನು ಸ್ಥಳದಲ್ಲಿಯೇ ಸೂಚಿಸಲಾಗುವುದು. ಪ್ರತಿ ಸ್ಪರ್ಧಿಗೂ 2 ಗಂಟೆ 30 ನಿಮಿಷಗಳ ಕಾಲಾವಕಾಶವಿದೆ. ಸ್ಪರ್ಧಿಗಳು ಅವಶ್ಯಕವಾದ ಕತ್ತರಿ, ಗೋಂದು ಕಾಗದಗಳನ್ನು ತಾವೇ ತರಬೇಕು. ಸಹಾಯಕರಿಗೆ ಅವಕಾಶವಿಲ್ಲ.

14. ಭಿತ್ತಿಪತ್ರ ರಚನೆ (Poster Making)

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ ಒಬ್ಬ ಸ್ಪರ್ಧಿಗೆ ಮಾತ್ರ ಅವಕಾಶವಿರುತ್ತದೆ ಮತ್ತು ಇಷ್ಟವಾದ ವಿಷಯವನ್ನು ಸ್ಪರ್ಧಿಗಳೇ ಆಯ್ಕೆ ಮಾಡಿಕೊಳ್ಳಬಹುದು. ಪ್ರತಿ ಸ್ಪರ್ಧಿಗೂ 2 ಗಂಟೆ 30 ನಿಮಿಷಗಳ ಕಾಲಾವಕಾಶವಿರುತ್ತದೆ. ಸ್ಪರ್ಧಿಗಳು ಅವಶ್ಯಕವಾದ ಬಣ್ಣ, ಬ್ರಷ್ ಇತ್ಯಾದಿಗಳನ್ನು ತಾವೇ ತರಬೇಕು. ಸಹಾಯಕರಿಗೆ ಅವಕಾಶವಿಲ್ಲ.

15. ಮಣ್ಣಿನ ಮಾದರಿ ರಚನೆ:

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ ಒಬ್ಬ ಸ್ಪರ್ಧಿಗೆ ಮಾತ್ರ ಅವಕಾಶವಿರುತ್ತದೆ. ಸ್ಪರ್ಧಿಗಳು ತಮಗೆ ಇಷ್ಟವಾದ ಮಾದರಿಯನ್ನು ಆರಿಸಿಕೊಳ್ಳಬಹುದು. ಪ್ರತಿ ಸ್ಪರ್ಧಿಗೂ 2 ಗಂಟೆ 30 ನಿಮಿಷಗಳ ಕಾಲಾವಕಾಶವಿದೆ. ಅವಶ್ಯಕವಾದ ಮಣ್ಣನ್ನು ಸ್ಥಳದಲ್ಲಿಯೇ ನೀಡಲಾಗುವುದು. ಸಹಾಯಕರಿಗೆ ಅವಕಾಶವಿಲ್ಲ.

16. ವ್ಯಂಗ್ಯಚಿತ್ರ ರಚನೆ :

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ ಒಬ್ಬ ಸ್ಪರ್ಧಿಗೆ ಮಾತ್ರ ಅವಕಾಶವಿದೆ. ಪ್ರತಿ ಸ್ಪರ್ಧಿಗೂ ನೀಡುವ 2 ಗಂಟೆ 30 ನಿಮಿಷಗಳ ಅವಧಿಯಲ್ಲಿ ತಮಗೆ ಇಷ್ಟವಾದ ವ್ಯಂಗ್ಯಚಿತ್ರ ರಚಿಸಬೇಕು. ಅವಶ್ಯಕವಾದ ಬಣ್ಣ, ಬ್ರಷ್ ಇತ್ಯಾದಿಗಳನ್ನು ಸ್ಪರ್ಧಿಗಳೇ ತರಬೇಕು. ಕಾಗದವನ್ನು ಮಾತ್ರ ನೀಡಲಾಗುವುದು. ಸಹಾಯಕರಿಗೆ ಅವಕಾಶವಿಲ್ಲ.

17. ರಂಗೋಲಿ ಸ್ಪರ್ಧೆ :

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ ಒಬ್ಬ ಸ್ಪರ್ಧಿಗೆ ಮಾತ್ರ ಅವಕಾಶವಿರುತ್ತದೆ. ಪ್ರತಿ ಸ್ಪರ್ಧಿಗೂ ನೀಡುವ 2 ಗಂಟೆ 30 ನಿಮಿಷಗಳ ಕಾಲ ಅವಧಿಯಲ್ಲಿ ಸ್ಥಳದಲ್ಲಿಯೇ ರಂಗೋಲಿ ರಚಿಸಬೇಕು. ಅವಶ್ಯಕವಾದ ರಂಗೋಲಿಪುಡಿ, ಬಣ್ಣ, ಬ್ರಷ್‌ಗಳನ್ನು ಸ್ಪರ್ಧಿಗಳೇ ತರಬೇಕು. ಸಹಾಯಕರಿಗೆ ಅವಕಾಶವಿಲ್ಲ.

ತೀರ್ಪು : ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಶ್ವವಿದ್ಯಾನಿಲಯವು ನೇಮಿಸುವ ತೀರ್ಪುಗಾರರ ತೀರ್ಮಾನವೇ ಅಂತಿಮವಾದುದು. ಸ್ಪರ್ಧಿಗಳೆಲ್ಲರೂ ಆ ತೀರ್ಪುಗಳಿಗೆ ಬದ್ಧರಾಗಬೇಕು ಚರ್ಚೆ, ವಿವಾದಗಳಿಗೆ ಅವಕಾಶ ಇರುವುದಿಲ್ಲ.

ವಿ.ಸೂ. : 1. ಯುವಜನೋತ್ಸವ ತಂಡವನ್ನು ಮೈಸೂರು ವಿಶ್ವವಿದ್ಯಾನಿಲಯ ನೇಮಿಸುವ ಸಾಂಸ್ಕೃತಿಕ ಸಮಿತಿಯು ಆಯ್ಕೆ ಮಾಡುವುದು. ಸಮಿತಿಯ ತೀರ್ಮಾನವೇ ಅಂತಿಮ ತೀರ್ಮಾನ.

2. ಈ ಅಂತರ ಕಾಲೇಜು ಸಾಂಸ್ಕೃತಿಕ ಸಾಹಿತ್ಯಕ ಸ್ಪರ್ಧೆಯ ವಿಜೇತರ ಪೈಕಿ 33 ಜನರನ್ನೊಳಗೊಂಡ ತಂಡವನ್ನು ದಕ್ಷಿಣ ವಲಯ ಯುವಜನೋತ್ಸವದಲ್ಲಿ ಮೈಸೂರು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಲು ಆಯ್ಕೆ ಮಾಡಲಾಗುವುದು.

3. ಸಮೂಹ ಸ್ಪರ್ಧೆಗಳಲ್ಲಿ (Group) ಬಹುಮಾನ ಪಡೆದ ಎಲ್ಲಾ ವಿಜೇತರನ್ನು ಯುವಜನೋತ್ಸವ ತಂಡಕ್ಕೆ ಸೇರಿಸಲಾಗುವುದಿಲ್ಲ. (ಈ ತಂಡಗಳನ್ನು ನಿಯೋಜಿತ ಸಮಿತಿಯು ಆಯ್ಕೆ ಮಾಡುತ್ತದೆ).

4. ಈ ಬಗ್ಗೆ ತಮ್ಮಿಂದ ಏನಾದರೂ ಸಲಹೆ ಸೂಚನೆಗಳಿದ್ದಲ್ಲಿ ಮುಕ್ತಮನಸ್ಸಿನಿಂದ ಈ ನಿರ್ದೇಶನಾಲಯದಲ್ಲಿ ಚರ್ಚಿಸಬಹುದು.

5. ಪ್ರತಿ ಸ್ಪರ್ಧೆಯನ್ನು ನಿಗದಿಪಡಿಸಿರುವ ಸಮಯದಲ್ಲಿ ಭಾಗವಹಿಸಿ, ಪೂರ್ಣಗೊಳಿಸಬೇಕು. ತಡವಾಗಿ ಬರುವಂತಹ ತಂಡವನ್ನು ಅನರ್ಹಗೊಳಿಸಲಾಗುವುದು.

ಸಹಿ/-

ನಿರ್ದೇಶಕ